ಲೆಕ್ಕ ಮಾಡಿಕೊಂಡು ಸಹಕಾರ ಸಂಸ್ಥೆಗಳು ಕ್ಲೈಂ ಬಿಲ್ಲುಗಳನ್ನು ತಯಾರಿಸಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು ಮತ್ತು ಸಹಕಾರ ಸಂಘಗಳ ಉಪ ನಿಬಂಧಕರು ಬಿಲ್ಲುಗಳನ್ನು ದೃಢೀಕರಿಸಿ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸಿದ ನಂತರವೇ ಬಡ್ಡಿ ಸಹಾಯಧನ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿದ್ದು 2010-11ನೇ ಸಾಲಿನಲ್ಲಿ ಇದುವರೆಗೆ ರೂ. 104.72 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) 2010-11ನೇ ಸಾಲಿಗೆ ರೈತರಿಗೆ ವಿತರಿಸಬೇಕಾದ ಸಾಲದ ಪ್ರಮಾಣ ವಿವರವನ್ನು ಈ ಕೆಳಗೆ ಕಾಣಿಸಲಾಗಿದೆ.

(ರೂ.ಕೋಟಿಗಳಲ್ಲಿ)

ಸಾಲದ ವಿವರ	ಗುರಿ
ಅಲ್ಪಾವಧಿ ಮತ್ತು ಮಧ್ಯಮಾವಧಿ	4297.33
ದೀರ್ಘಾವಧಿ	250.00
ಒಟ್ಟು	4547.33

ಲೋಕೋಪಯೋಗಿ ಇಲಾಖೆ ರಸ್ತೆ ಅಭಿವೃದ್ಧಿ

19 (35) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ರಸ್ತೆಗಳು ನಾದುರಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

ಆ) ಉಳ್ಳಾಲದಲ್ಲಿ ನಡೆದ ಉರುಸ್ ಮತ್ತು ರಾಣಿ ಅಬ್ಬಕ್ಕ ಉತ್ಸವ ಸಂದರ್ಭದಲ್ಲಿ ಇಲಾಖೆ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿಪಡಿಸಿದೆ ; ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯಡಿ ಒಟ್ಟಾರೆ 71.96 ಕಿ.ಮೀ. ಗಳ ಉದ್ದದ ರಸ್ತೆಗಳು ನಿರ್ವಹಣೆಯಲ್ಲಿದ್ದು ಇವುಗಳ ಕೆಲವು ಭಾಗಗಳು ನಾದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಕಾಮಗಾರಿಗಾಗಿ 2010–11ನೇ ಸಾಲಿಗೆ ರೂ. 18.15 ಲಕ್ಷ ಅನುದಾನವು ಲಭ್ಯಗೊಂಡಿದ್ದು, ಇದರನುಸಾರ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಫೆಬ್ರವರಿ 2011ರ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. 2010–11ನೇ ಸಾಲಿನಲ್ಲಿ "5054–ಇತರೆ ರಸ್ತೆ ನಿರ್ಮಾಣ" ಲೆಕ್ಕಶೀರ್ಷಿಕೆ ಅಡಿ ರೂ. 224.00 ಲಕ್ಷ ಅಂದಾಜು ಮೊತ್ತದಂತೆ ಒಟ್ಟಾರೆ 15.45 ಕಿ.ಮೀ. ಉದ್ದದ ನಾಲ್ಕು ರಸ್ತೆ ಕಾಮಗಾರಿಗಳು ಹಾಗೂ "ಸುವರ್ಣ ರಸ್ತೆ ವಿಕಾಸ" ಯೋಜನೆಯಡಿ ರೂ. 182.28 ಲಕ್ಷ ಅಂದಾಜು ಮೊತ್ತದಂತೆ ಒಟ್ಟಾರೆ 6.30 ಕಿ.ಮೀ. ಉದ್ದದ ಐದು ರಸ್ತೆ ಅಭಿವೃದ್ಧಿ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಇದಕ್ಕೆದುರಾಗಿ 5054–ಶೀರ್ಷಿಕೆಯಡಿ ಈಗಾಗಲೇ 7.55 ಕಿ.ಮೀ. ಉದ್ದದ ರಸ್ತೆಯನ್ನು ಪೂರ್ಣಗೊಳಿಸಲಾಗಿದ್ದು, ಉಳಿದಿರುವ ಕಾಮಗಾರಿಗಳನ್ನು ಶೀಘ್ರದಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಆ) ಉಳ್ಳಾಲದಲ್ಲಿ ನಡೆದ ಉರುಸ್ ಮತ್ತು ರಾಣಿ ಅಬ್ಬಕ್ಕ ಉತ್ಸವ ಸಂದರ್ಭದಲ್ಲಿ ಲೋಕೋಪಯೋಗಿ ರಸ್ತೆಗಳನ್ನು ಅಭಿವೃದ್ಧಿಗೊಳಿಸಿರುವುದಿಲ್ಲ ಹಾಗೂ ಇದುವರೆಗೆ ಯಾವುದೇ ವೆಚ್ಚವು ಆಗಿರುವುದಿಲ್ಲ.

ಮತ್ಸ್ಯ ಆಶ್ರಯ ಯೋಜನೆಯ ಪ್ರಗತಿ

20 (36) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಬಂದರು, ಒಳನಾಡು ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010–11ನೇ ಸಾಲಿನಲ್ಲಿ 'ಮತ್ಸ್ಯ ಆಶ್ರಯ' ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)

ಆ) ಈ ಯೋಜನೆಯಲ್ಲಿ ಈ ವರ್ಷ ಎಷ್ಟು ಹಣವನ್ನು ಕಾಯ್ದಿರಿಸಲಾಗಿದೆ ?

ಶ್ರೀ ಜಿ. ಕೃಷ್ಣ ಪಾಲೇಮಾರ್ (ಬಂದರು, ಒಳನಾಡು ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮೀನುಗಾರಿಕೆ ಸಚಿವರು):

ಅ) 2010–11ನೇ ಸಾಲಿನಲ್ಲಿ ಮತ್ಸ್ಯ ಆಶ್ರಯ ಯೋಜನೆಯಡಿ 347 ಮನೆಗಳನ್ನು ನಿರ್ಮಿಸಲಾಗಿದೆ. (ವಿಧಾನಸಭಾ ಕ್ಷೇತ್ರವಾರು ವಿವರ ಅನುಬಂಧದಲ್ಲಿ ಒದಗಿಸಲಾಗಿದೆ).

ಆ) ಈ ಯೋಜನೆಯಲ್ಲಿ ಈ ವರ್ಷ ರೂ. 500.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.